ಶ್ರೀ ಜೆ. ಎಸ್. ದೇಶ್‌ಮುಂಖ್ (ಅರಣ್ಯ, ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು).—

(ಅ) ಬೆಂಕಿ ಆಕಸ್ಮಿಕದಲ್ಲಿ ಮನೆ ಕಳೆದುಕೊಂಡವರಿಗೆ ವಿಶೇಷ ವಿತ್ತಾಧಿಕಾರ ಸಂಖ್ಯೆ ೨೫೫ರ ಪ್ರಕಾರ ಈ ಕೆಳಕಂಡ ಪರಿಮಾಣದ ಮರಗಳನ್ನು (ಎಲ್ಲಾ ರೀತಿಯ ಮರಗಳೂ ಸೇರಿ) ಉಚಿತವಾಗಿ ಮಂಜೂರು ಮಾಡಲು ಅರಣ್ಯ ಇಲಾಖಾಧಿಕಾರಿಗಳಿಗೆ ಅಧಿಕಾರವಿರುತ್ತದೆ.

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು	...	೧೦೦೦-೦೦ (ಪ್ರತಿ ಪ್ರಕರಣದಲ್ಲಿ)
ಅರಣ್ಯ ಸಂರಕ್ಷಣಾಧಿಕಾರಿಗಳು	...	೫೦೦-೦೦ (ಪ್ರತಿ ಪ್ರಕರಣದಲ್ಲಿ)

(ಆ) ಇಲ್ಲ ಈ ರೀತಿ ಮರ ವಿತರಣೆ ಮಾಡುವಲ್ಲಿ ಈವರೆಗೆ ವಿಳಂಬವಾದ ಪ್ರಕರಣಗಳು ಇರುವುದಿಲ್ಲ.

(ಇ) ಈ ಪ್ರಶ್ನೆಯು ಉದ್ಭವಿಸುವುದಿಲ್ಲ.

ಪಶು ಸಂಗೋಪನ ಆಸ್ಪತ್ರೆಗಳಲ್ಲಿ ಸಂದರ್ಶಕರ ಸಮಿತಿಯ ರಚನೆ

೮೦೯(ಡಿ). ಶ್ರೀ ಚಂದ್ರಕಾಂತ್ ಜಿ. ಬೆಲ್ಲದ್ (ಧಾರವಾಡ).— ಮಾನ್ಯ ರೇಷ್ಮೆ, ಪಶುಸಂಗೋಪನಾ ಮತ್ತು ಮತ್ಸ್ಯೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪ್ರಮುಖವಾದ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಇರುವ ಪಶು ಸಂಗೋಪನಾ ಆಸ್ಪತ್ರೆಗಳಲ್ಲಿ ಸಂದರ್ಶಕರ ಸಮಿತಿಗಳನ್ನು ಸರ್ಕಾರದವರ ರಚಿಸಿರುವರೆ ?

ಆ) ಹಾಗಿದ್ದಲ್ಲಿ ಸಮಿತಿಗಳನ್ನು ರಚಿಸಲು ಕ್ರಮ ಕೈಗೊಳ್ಳಲಾಗುವುದೆ ?

ಇ) ಈ ಮೇಲಿನ ಆಸ್ಪತ್ರೆಗಳು ಸರಿಯಾದ ಸೇವೆ ಮಾಡುತ್ತಿರುವುದಿಲ್ಲವೆಂಬುದು ಹಾಗೂ ಹಾಗೂ ಸರಿಯಾದ ಔಷಧೋಪಚಾರ ಹಾಗೂ ಚಿಕಿತ್ಸೆಯು ದೋಷಗಳು ಇರುವುದು ಸರಕಾರದವರ ಗಮನಕ್ಕೆ ಬಂದಿರುವುದೆ ?

ಈ) ಹಾಗಿದ್ದಲ್ಲಿ ಇದನ್ನು ಸರಿಪಡಿಸಲು ಕ್ರಮ ಕೈಗೊಳ್ಳುವರೇ ?

ಶ್ರೀ ಕೆ. ಎಂ. ಕೃಷ್ಣಾ ರೆಡ್ಡಿ (ರೇಷ್ಮೆ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು).—

ಅ) ಇಲ್ಲ.

ಆ) ಪರಿಶೀಲಿಸಲಾಗುವುದು.

ಇ) ಬಂದಿದೆ.

ಈ) ಹೌದು.

ಕಪ್ಪನಹಳ್ಳಿ ಮತ್ತು ಕಾಗೇನಹಳ್ಳಿ ಗ್ರಾಮದಲ್ಲಿ ಪಶು ವೈದ್ಯಶಾಲೆ ಪ್ರಾರಂಭಿಸುವ ಬಗ್ಗೆ

೧೦೯೧. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).— ಮಾನ್ಯ ರೇಷ್ಮೆ, ಪಶು ಸಂಗೋಪನಾ ಮತ್ತು ಮತ್ಸ್ಯೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಿಕಾರಿಪುರ ತಾಲ್ಲೂಕಿನ ಕಪ್ಪನಹಳ್ಳಿ ಮತ್ತು ಕಾಗೇನಹಳ್ಳಿ ಗ್ರಾಮದಲ್ಲಿ ಪಶುವೈದ್ಯ ಶಾಲೆ ಯನ್ನು ಪ್ರಾರಂಭಿಸಲು ಸರ್ಕಾರದವರು ಏನಾದರೂ ಯೋಚಿಸಿದ್ದಾರೆಯೇ ?

ಆ) ಪ್ರಸ್ತುತ ಸರ್ಕಾರ ಅಧಿಕಾರಕ್ಕೆ ಬಂದ ನಂತರ ರಾಜ್ಯದಲ್ಲಿ ಹೊಸದಾಗಿ ಪ್ರಾರಂಭಿಸಿದ ಸದರಿ ಆಸ್ಪತ್ರೆಗಳ ಸಂಖ್ಯೆ ಎಷ್ಟು ?

ಶ್ರೀ ಕೆ. ಎಂ. ಕೃಪ್ಪಾ ರೆಡ್ಡಿ (ರೇಷ್ಮೆ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು).—

ಅ) ಪ್ರಸ್ತುತ ಸಾಲಿನಲ್ಲಿಲ್ಲ.

ಆ) 02 (೧೬ ಪಶುವೈದ್ಯ ಶಾಲೆಗಳು, ಒಂದು ಗ್ರಾಮೀಣ ಪಶುವೈದ್ಯ ಶಾಲೆ).—

ಕರ್ನಾಟಕ ವಿದ್ಯುತ್ ಮಂಡಲಿಯಲ್ಲಿ ವಿದ್ಯುತ್ ಮೀಟರುಗಳ ಕೊರತೆ

೧೧೯೮(ಡಿ). ಶ್ರೀ ವಸಂತ ವಿ. ಸಾಲಿಯಾನ (ಕಾಪು).—ಮಾನ್ಯ ಕೈಗಾರಿಕೆ, ವಾಣಿಜ್ಯ ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ವಿದ್ಯುತ್ ಪಡೆದುಕೊಳ್ಳುತ್ತಿರುವ ಗ್ರಾಹಕರಿಗೆ ವಿದ್ಯುಚ್ಛಕ್ತಿ ಮಂಡಲಿಯವರು ಮೀಟರುಗಳನ್ನು ಒದಗಿಸದಿದ್ದು, ಪ್ರತಿ ತಿಂಗಳು ಕನಿಷ್ಠ ದರವನ್ನು ವಿಧಿಸುತ್ತಿರುವುದರಿಂದ ಗ್ರಾಹಕರು ಅದರಲ್ಲೂ ವಿಶೇಷವಾಗಿ ಗ್ರಾಮಾಂತರ ಜನತೆಗೆ ತೊಂದರೆಗೆ ಈಡಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಮೀಟರುಗಳನ್ನು ಒದಗಿಸಲು ಸರ್ಕಾರದವರು ಕ್ರಮ ಕೈಕೊಳ್ಳಲು ಉದ್ದೇಶಿಸಿರುವರೆ ?

ಶ್ರೀ ಜೆ. ಹೆಚ್. ಪಟೇಲ್ (ವಿದ್ಯುತ್ ಮತ್ತು ಕೈಗಾರಿಕಾ ಸಚಿವರು).—

(ಅ) ಮೀಟರುಗಳು ಲಭ್ಯವಿಲ್ಲದಿದ್ದಾಗ ಹೊಸ ಗ್ರಾಹಕರಿಗೆ ಮೀಟರಿಲ್ಲದೆ ವಿದ್ಯುತ್ ಸರಬರಾಜು ಮಾಡಲಾಗುತ್ತಿತ್ತು. ಅಂತಹ ಗ್ರಾಹಕರಿಗೆ ನಿರ್ಧಿಷ್ಟ ಬಳಕೆಯ ಆದಾರದ ಮೇಲೆ ಬಿಲ್ಲನ್ನು ನೀಡಲಾಗುತ್ತಿದೆ. ಮೀಟರುಗಳನ್ನು ಅಳವಡಿಸಿದ ಮೇಲೆ ಮೂರು ತಿಂಗಳು ಬಳಕೆಯ ಸರಾಸರಿ ಆಧಾರದ ಮೇಲೆ ಪರಿಷ್ಕೃತ ಬಿಲ್ಲನ್ನು ನೀಡಿ ಲೆಕ್ಕದಲ್ಲಿ ಮೂರು ಹೊಂದಾಣಿಕೆ ಮಾಡಲಾಗುತ್ತಿದೆ ೮-೧೧-೧೯೮೬ ರಿಂದೀಚೆಗೆ ಮೀಟರ್ ಅಳವಡಿಸದೆ ಯಾವ ಹೊಸ ಗ್ರಾಹಕರಿಗೂ ವಿದ್ಯುತ್ ಒದಗಿಸುತ್ತಿಲ್ಲ.

ಆ) ಆರ್ಥಿಕ ಲಭ್ಯತೆಯನ್ನಾಧರಿಸಿ ಹೊಸ ಮೀಟರುಗಳನ್ನು ಕೊಳ್ಳಲಾಗುತ್ತಿದೆ.

ಶಿಶಿಲ ಮತ್ತು ಶಿಬಾಜೆ ಗ್ರಾಮಗಳಲ್ಲಿ ವಿದ್ಯುತ್ ಒದಗಿಸುವ ಬಗ್ಗೆ

೧೨೫೩. ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ)—ಮಾನ್ಯ ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಳ್ತಂಗಡಿ ತಾಲ್ಲೂಕಿನ ಶಿಶಿಲ ಮತ್ತು ಶಿಬಾಜೆ ಗ್ರಾಮಗಳಿಗೆ ವಿದ್ಯುತ್ ಮಾರ್ಗ ಹಾಕುವ ಕಾರ್ಯ ಮಂದಗತಿಯಲ್ಲಿ ನಡೆಯುತ್ತಿರುವುದಕ್ಕೆ ಕಾರಣವೇನು.

ಆ) ಸದರಿ ಗ್ರಾಮಗಳಿಗೆ ವಿದ್ಯುಚ್ಛಕ್ತಿ ಒದಗಿಸುವ ವ್ಯವಸ್ಥೆಯನ್ನು ಎಷ್ಟು ಸಮಯದೊಳಗೆ ಮಾಡಲಾಗುವುದು ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು).—

ಅ) ಶಿಶಿಲ ಗ್ರಾಮಕ್ಕೆ ೧೧ ಕೆ.ವಿ.ಮಾರ್ಗವು, ಅರಣ್ಯದಲ್ಲಿ ಹಾದು ಹೋಗಬೇಕಾಗಿದ್ದು ಅರಣ್ಯ ಇಲಾಖೆಯ ಅನುಮತಿ ಕೇಳಲಾಗಿತ್ತು. ಇದರಲ್ಲಿ ವಿಳಂಬವಾದ್ದರಿಂದ ಲೈನನ್ನು ಈಗ ಹೊಸದಾಗಿ ಮಾಡಿದ ರಸ್ತೆಯ ಪಕ್ಕದಲ್ಲಿ ಹಾಕಲಾಗುತ್ತಿದೆ. ಶಿಬಾಜೆ ಗ್ರಾಮಕ್ಕೆ ಹಾಕಬೇಕಾದ ಲೈನನ್ನು ಶಿಶಿಲಕ್ಕೆ ಹೋಗುವ ಲೈನಿಗೆ ಮಾರ್ಗ ಮಧ್ಯದಲ್ಲಿ ಜೋಡಿಸಲಾಗುತ್ತಿದೆ.

ಆ) ಎರಡು ಮಾರ್ಗಗಳ ಕಾರ್ಯವೂ ಪ್ರಗತಿಯಲ್ಲಿದ್ದು ಏಪ್ರಿಲ್ ೧೯೮೭ರ ಕೊನೆಯ ವೇಳೆಗೆ ವಿದ್ಯುತ್ ಸರಬರಾಜು ಮಾಡುವ ನಿರೀಕ್ಷೆ ಇದೆ.